O.S.No.371/2018
PW -1

ದಿನಾಂಕ 30/03/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಮುಂದುವರೆದ ಪಾಟೀ ಸವಾಲು :- ಶ್ರೀ ಎಂ.ಎನ್.ಜಿ. ಪ್ರತಿವಾದಿ 7 ರಿಂದ 9 ರವರ ಪರ ವಕೀಲರಿಂದ**

ರಂಗಾಪುರದಲ್ಲಿ ನಮ್ಮ ತಂದೆ ಅಣ್ಣ ತಮ್ಮಂದಿರ ವಿಭಾಗದಲ್ಲಿ ಸರ್ವೆ ನಂ-136/1 ಬಿ 2 ಎಕರೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿ ನಮ್ಮ ತಂದೆಯ ತಾತನ ಕಡೆಯಿಂದ ಬಂದಿರುತ್ತದೆ. ರಂಗಪುರದಲ್ಲಿರುವ ಜಮೀನು ನಮ್ಮ ತಂದೆಯ ತಾತನಕಡೆಯಿಂದ ಬಂದಿರುವ ಜಮೀನು ಎಂದರೆ ಸರಿ, ಸದರಿ ಆಸ್ತಿಯ ವಿಸ್ತೀರ್ಣ 2 ಎಕರೆ 31 ಗುಂಟೆ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ನಾನು ನೋಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆಗೆ 2 ಎಕರೆ 30 ಗುಂಟೆ ಒಟ್ಟಾಗಿ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆ ಅಣ್ಣ ತಮ್ಮಂದಿರ ವಿಭಾಗದಲ್ಲಿ ಸರ್ವೆ ನಂ-136/1 ಬಿ 2 ಎಕರೆ 31 ಒಟ್ಟಾಗಿ ಬಂದಿರುತ್ತದೆ ಎಂದರೆ ಸಾಕ್ಷಿ ಬಂದಿರಬಹುದು ಎಂದು ಉತ್ತರಿಸಿರುತ್ತಾರೆ.

2. ನಾನು ಸದರಿ ಆಸ್ತಿಯ ದಾಖಲಾತಿಗಳನ್ನು ನೋಡಿರುವುದಿಲ್ಲ ಮತ್ತು ಹಾಜರುಪಡಿಸಿರುವುದಿಲ್ಲ. ನಾನು ಎರಡು ಸ್ವತ್ತುಗಳಿಗೆ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ತಂದೆಗೆ ತಾತನ ಕಡೆಯಿಂದಿ ಬಂದಿರುತ್ತವೆ. ಸದರಿ ಆಸ್ತಿಗಳು ಎರಡು ತಾಕು ಯಾವ ರೀತಿ ಆಗಿರುತ್ತವೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಗಳ ಖಾತೆ ಪಹಣಿ ಯಾರ ಹೆಸರಿನಲ್ಲಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ತಿಳಿದುಕೊಂಡಿರುವುದಿಲ್ಲ. ನಾನು 5 ಮತ್ತು 6 ನೇ ಪ್ರತಿವಾದಿಯನ್ನು ದಾವಾ ಆಸ್ತಿ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲ. ದಾವಾ ಐಟಂ ನಂ-1 ರಾಜಣ್ಣನ ಹೆಸರಿಗೆ ದಾವಾ ಐಟಂ ನಂ-2 ರಾಮಣ್ಣನ ಹೆಸರಿಗೆ ಪಹಣಿ ಬರುತ್ತಿವೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ನನ್ನ ತಂದೆ ಮತ್ತು ತಾಯಿ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು. ರಾಜಣ್ಣ ಮತ್ತು ರಾಮಣ್ಣ ಇವರು ಸಹಿ ಹಾಕುತ್ತಾರೆ. ಪಿ. ನಾಗರಾಜು ಬಿನ್ ತಮ್ಮಣ್ಣ ಎಂದರೆ ನನ್ನ ಗಂಡ ಎಂದರೆ ಸರಿ. ನನ್ನ ಗಂಡನ ಸಹಿ ಹಾಕುತ್ತಾರೆ. ದಾವಾ ಆಸ್ತಿಗಳಲ್ಲಿ ಎರಡು ಶೆಡ್ ಗಳು ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲು ಇದ್ದವು ಈಗ ಬಿದ್ದು ಹೋಗಿರುತ್ತವೆ ಎಂದು ಉತ್ತರಿಸಿರುತ್ತಾರೆ. ದಿ. 26/11/1996 ರಂದು ನನ್ನ ತಂದೆ, ತಾಯಿ, ನನ್ನ ತಂಗಿ , ಪ್ರತಿವಾದಿ 5 ಮತ್ತು 6 ರವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಸರ್ವೆ ನಂ- 36/1 ಬಿ ರಲ್ಲಿ ರಾಜಣ್ಣ ಮತ್ತು ರಾಮಣ್ಣನ ಭಾಗಕ್ಕೆ ತಲಾ 1 ಎಕರೆ 15 ಗುಂಟೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗ ಪತ್ರಕ್ಕೆ ನನ್ನ ಗಂಡ ಸಾಕ್ಷಿದಾರನಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ರಾಮಣ್ಣ ಮತ್ತು ರಾಜಣ್ಣನಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸದರಿ ವಿಭಾಗ ಪತ್ರದ ಆಧಾರದ ಮೇಲೆ ರಾಜಣ್ಣ ಮತ್ತು ರಾಮಣ್ಣನ ಹೆಸರಿಗೆ ಖಾತೆ ಪಹಣಿ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಐಟಂ ನಂ-1 ರಾಜಣ್ಣನ ಸ್ವಾಧೀನದಲ್ಲಿ, ದಾವಾ ಐಟಂ ನಂ-2 ರಾಮಣ್ಣನ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿಯಲ್ಲ. ರಾಜಣ್ಣನ ಹೆಂಡತಿ ಲೀಲಾವತಿ ಜೀವನಾಂಶ ಕೋರಿ ಕೇಸು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ರಾಜಣ್ಣನ ಮಕ್ಕಳು ದಾವಾ ಐಟಂ ನಂ-1 ರಲ್ಲಿ ಭಾಗ ಕೋರಿ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದಿ 7 ಮತ್ತು 9 ರವರನ್ನು ಅನಾವಶ್ಯಕವಾಗಿ ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 9 ರವರು ರಾಜಣ್ಣನ ಮಕ್ಕಳು ಇರುತ್ತಾರೆ ಎಂದರೆ ಸರಿ.

5. ಲೀಲಾವತಿ ಜೀವನಾಂಶ ಕೋರಿ ಸಲ್ಲಿಸಿದ ದಾವೆಯಲ್ಲಿ ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ, ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 9 ಇವರ ಜೀವನದ ಸಂಬಂಧ ಗಲಾಟೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಮೇಲೆ ರಾಜಣ್ಣ ಮತ್ತು ರಾಮಣ್ಣ ರವರು ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ದಾವೆ ಹೂಡುವುದಕ್ಕಿಂತ ಮೊದಲು ಭಾಗ ಕೊಡುವಂತೆ ನಾನು ಕೇಳಿರುವುದಿಲ್ಲ ಎಂದರೆ ಸರಿ. ನನಗೆ ರಾಜಣ್ಣ ಮತ್ತು ರಾಮಣ್ಣ ರವರು ಭಾಗ ಮಾಡಿಕೊಂಡು ಸ್ವಾಧೀನದಲ್ಲಿರುವ ವಿಚಾರ ಗೊತ್ತಿದ್ದರೂ ಸಹ ರಾಜಣ್ಣನ ಮಾತು ಕೇಳಿ ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ